**ಸಾಕ್ಷಿಗೆ ದಿನಾಂಕಃ22-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ. HSN ವಕೀಲರಿಂದ ::**

ನಿಡಿ2 ಪಹಣಿಯಲ್ಲಿ ಇರುವ ಆಸ್ತಿಯು ಸರ್ಕಾರಿ ಜಾಗ ಆಗಿರುತ್ತದೆ ಎಂದರೆ ಸರಿ. ನಿಡಿ2 ರಲ್ಲಿ ಯಾವುದೇ ಖಾಸಗಿ ವ್ಯಕ್ತಿಯ ಹೆಸರು ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನ್ಯಾಯಾಲಯದ ನಿಯೋಗಿಯ ದಾಖಲೆ ಅಸಲು ದಾವಾ 336/2012 ಗೆ ಸಂಬಂಧಪಟ್ಟಿದ್ದಾಗಿರುತ್ತದೆ. ನ್ಯಾಯಾಲಯದ ನಿಯೋಗಿಯು ಅವರ ವರದಿಯನ್ನು ಅರ್ಜಿದಾರರು ತೋರಿಸಿಕೊಟ್ಟಂತೆ ಮಾಡಿರುವುದಾಗಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿಗೆ ನಾನು ಸರ್ಕಾರದ ಜಾಗವನ್ನು ತೋರಿಸಿ ಸುಳ್ಳಾಗಿ ನಕ್ಷೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 25 ರಲ್ಲಿ ನಾನು ತಂತಿ ಬೇಲಿ ಅಳವಡಿಸಿರುತ್ತೇನೆ ಎಂದು ಹೇಳಿರುವ ಜಾಗವನ್ನು ಹೊರತುಪಡಿಸಿ ಇತರೇ ಜಾಗದ ಮೇಲೆ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಎಸಿ ನ್ಯಾಯಾಲಯದಿಂದ ನಮಗೆ ಸಾಗುವಳಿ ಚೀಟಿ ನೀಡಬೇಕೆಂದು ಇಲ್ಲಿಯವರೆಗೂ ಆದೇಶ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಾಗುವಳಿ ಚೀಟಿ ಅರ್ಜಿ ಸಹ ವಜಾ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಎಸಿ ಆದೇಶದ ಅನ್ವಯ ನನಗೆ ಸಾಗುವಳಿ ಚೀಟಿ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಸಿ ರವರು ನನ್ನ ಅರ್ಜಿಯನ್ನು ಬಗರ್ ಹಕ್ಕುಂ ಸಮಿತಿ ಪರಿಗಣನೆ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಮಂಜೂರಾತಿ ಕೋರಿ 2016 ರಲ್ಲಿ ನಾನು ಬಗರ್ ಹಕ್ಕುಂ ಸಮಿತಿ ಮುಂದೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಅದರ ಹಿಂದೆ ನಾನು ಸಲ್ಲಿಸಿದ್ದ ಮಂಜೂರಾತಿ ಅರ್ಜಿಗಳನ್ನು ವಜಾ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 2016 ನೇ ಸಾಲಿನಲ್ಲಿ ಸಹ ನನ್ನ ಮಂಜೂರಾತಿ ಅರ್ಜಿಯನ್ನು ತಿರಸ್ಕಾರ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಪ್ರಸ್ತುತದಲ್ಲಿ ಸಹ ವಾದಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ12 ರಲ್ಲಿ ನನ್ನ ಮಾವ ಹಾಗೂ ನನ್ನ ಅತ್ತೆ ಪ್ರತ್ಯೇಕವಾಗಿ 2 ಅರ್ಜಿಗಳನ್ನು ಕೊಟ್ಟಿರುವುದು ಕಂಡು ಬರುತ್ತದೆ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ತಪ್ಪಾಗಿ ನಮೂದು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ 2 ಅರ್ಜಿಗಳನ್ನು ದಿಃ 17.09.2016 ರಂದು ವಜಾ ಮಾಡಲಾಗಿರುತ್ತದೆ ಎಂದರೆ ಸರಿ. ನಮ್ಮ ಸ್ವತ್ತಿಗೆ ಸಂಬಂಧಪಟ್ಟಂತೆ ಆಗಿರುವ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾವುಗಳು ಯಾವುದೇ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದ ಕಾರಣ ನಮ್ಮ ಅರ್ಜಿ ವಜಾ ಮಾಡಿದ್ದು ಇವರೆಗೂ ಯಾವುದೇ ಸಾಗುವಳಿ ಚೀಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: